The development of this road will be undertaken during the year 2009-10 depending upon the availability of funds.

1070 ಶ್ರೀ ಶಂಕರಪಾಟೀಲ ಮುನೇನಕೊಪ್ಪ : ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಧಾರವಾಡ ಜಿಲ್ಲೆಯ ನವಲಗುಂದ ತಾಲ್ಲೂಕು ವ್ಯಾಪ್ತಿಯಲ್ಲಿ ಬರುವ ರಾಜ್ಯ ಹೆದ್ದಾರಿ ಸಂಖ್ಯೆ 136ರ 75.350 ಕಿ.ಮೀ ದಿಂದ 79.600 ಕಿ.ಮೀರವರೆಗೆ ಒಟ್ಟು 4.250 ಕಿ.ಮೀ ರಸ್ತೆಯು ಹಾಳಾಗಿದ್ದು, ಇದನ್ನು ಅಭಿವೃದ್ಧಿಪಡಿಸಲು ಸರ್ಕಾರವು ತೆಗದುಕೊಂಡಿರುವ ಕ್ರಮಗಳೇನು;

ಆ) ಈ ರಸ್ತೆಯು ಹಾಳಾಗಿದ್ದು, ಸಂಚಾರಕ್ಕೆ ತೊಂದರೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಇ) ಹಾಗಿದ್ದಲ್ಲಿ, ಈ ಕಾಮಗಾರಿಯನ್ನು ಎಂದಿನಿಂದ ಪ್ರಾರಂಭಿಸ ಲಾಗುವುದು?

ಶ್ರೀ ಸಿ.ಎಂ.ಉದಾಸಿ (ಲೋಕೋಪಯೋಗಿ ಸಚಿವರು) :

ಅ) ಮತ್ತು ಆ) ನವಲಗುಂದ ತಾಲ್ಲೂಕಿನ ವ್ಯಾಪ್ತಿಯ ಗಜೇಂದ್ರಗಡ–ಸೊರಬ ರಾಜ್ಯ ಹೆದ್ದಾರಿ–136ರ ಸರಪಳಿ ಕಿ.ಮೀ 75.35ರಿಂದ 76.60ರವರೆಗೆ ಒಟ್ಟು 4.25 ಕಿ.ಮೀ ರಸ್ತೆಯು ಇತ್ತೀಚಿನ ಮಳೆಯಿಂದ ಹಾಗೂ ರಸ್ತೆ ಬದಿಯ ಕೆರೆಯಿಂದ ತೆಗೆದ ಹೂಳು ರಸ್ತೆಯನ್ನು ಆವರಿಸಿದ್ದರಿಂದ, ಹಾಳಾಗಿದೆ.

ರಸ್ತೆಗೆ ಮುರಂ ಕೋರಿಂಗ್ ಅಳವಡಿಸಿ ಹಾಗೂ ಕಿ.ಮೀ 76.18ರಲ್ಲಿ ಭಾಗಶಃ ರಿಟೈನಿಂಗ್‌ವಾಲ್ ನಿರ್ಮಿಸಿ ವಾಹನ ಸಂಚಾರಕ್ಕೆ ಅನುವು ಮಾಡಿಕೊಡಲಾಗಿದೆ. ವಾರ್ಷಿಕ ನಿರ್ವಹಣೆಯನ್ನು ಸಹ ಮಾಡಲಾಗುತ್ತಿದೆ.

ಇ) ಈ ರಸ್ತೆ ಸುಧಾರಣೆ ಕಾಮಗಾರಿಯನ್ನು 2009–10ನೇ ಸಾಲಿನಲ್ಲಿ ಅನುದಾನದ ಲಭ್ಯತೆಯನ್ನಾಧರಿಸಿ ಕೈಗೆತ್ತಿಕೊಳ್ಳಲಾಗುವುದು.

1070 Sri Shankara Patila Munnenakoppa : Hon'ble Minister for Public Works kindly answer to the below question?

a) Totally 4.250 km long road from km 7.350 to 79.600 of State Highway-136 in Navalagunda taluk of Dharwad district having been damaged, what are the actions taken by the Government to development this road;

b) Whether it has come to the notice of Government that this road has been damaged causing inconvenience for traffic;

c) If so, when this work will be commenced?

Sri C.M.UDASI (Minister for Public Works) :

a) and b) Totally 4.25 km long road in chainage km 75.35 to 76.60 of Gajendragad Soraba State Highway-136 in Navalagunda taluk has been damaged due to recent rains and silt removed from roadside tank covering the road.

The road has been cleared for traffic movement by doing murram coring and by building partial retaining wall at km 76.18 Annual maintenance is also being undertaken.

c) The improvement work of this road will be undertaken during the year 2009-10 depending upon the availability of funds.

356 ಶ್ರೀ ರೇವಣ್ಣ ಹೆಚ್.ಡಿ.(ಹೊಳೇನರಸೀಪುರ) : ಮಾನ್ಯ ಅಬಕಾರಿ, ವಾರ್ತಾ, ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಹಾಗೂ ಬೆಂಗಳೂರು ಜಲಮಂಡಳಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೃಹತ್ ಬೆಂಗಳೂರು ಮಹಾನಗರದ ಜನಸಂಖ್ಯೆ ಎಷ್ಟು, ಪ್ರತಿದಿನ ನಗರಕ್ಕೆ ಸರಬರಾಜಾಗುತ್ತಿರುವ ನೀರಿನ ಪ್ರಮಾಣ ಎಷ್ಟು, ಎಷ್ಟು ಹಂತಗಳಲ್ಲಿ ಕಾವೇರಿ ನೀರು ಸರಬರಾಜಾಗುತ್ತಿದೆ, ಇದರಿಂದ ಅನುಕೂಲ ಪಡೆಯುತ್ತಿರುವ ಜನಸಂಖ್ಯೆ ಎಷ್ಟು?

ಆ) "ಬೃಹತ್ ಬೆಂಗಳೂರು ಮಹಾನಗರ 2020ನೇ ಯೋಜನೆ "ನೀರಿನ ಕೊರತೆಯನ್ನು ನೀಗಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು?

ಇ) ಪ್ರತಿ ದಿನ ಸೋರಿಕೆಯಾಗುತ್ತಿರುವ ಕುಡಿಯುವ ನೀರಿನ ಪ್ರಮಾಣ ಎಷ್ಟು, ಸೋರಿಕೆಯಾಗುತ್ತಿರುವ ಹಂತಗಳು ಯಾವುವು, ಇದರಿಂದ ಸರ್ಕಾರಕ್ಕೆ ಆಗುತ್ತಿರುವ ನಷ್ಟವೆಷ್ಟು, ಸೋರಿಕೆಯನ್ನು ತಡೆಗಟ್ಟಲು ಕೈಗೊಂಡಿರುವ ಕ್ರಮಗಳೇನು?

ಈ) ಪ್ರತಿ ದಿನ ತಿಪ್ಪಗೊಂಡನಹಳ್ಳಿ ಜಲಾಶಯದಿಂದ ಬೆಂಗಳೂರಿಗೆ ಸರಬರಾಜಾಗುತ್ತಿರುವ ನೀರಿನ ಪ್ರಮಾಣ ಎಷ್ಟು, ಇದರಿಂದ ಅನುಕೂಲ ಪಡೆಯುತ್ತಿರುವ ಜನಸಂಖ್ಯೆ ಎಷ್ಟು; ತಿಪ್ಪಗೊಂಡನಹಳ್ಳಿ ಕೆರೆ ತುಂಬಲು ಆಸರೆ ಇದ್ದ ಎಲ್ಲಾ ಮೂಲಗಳು ಮುಚ್ಚಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ, ಹಾಗಿದ್ದರೆ, ನೀರಿನ ಮೂಲವನ್ನು ಪುನರ್ ಸ್ಥಾಪಿಸಲು/ಹೆಚ್ಚಿಸಲು ಸರ್ಕಾರ ಕೈಗೊಂಡ ಕ್ರಮಗಳೇನು?